ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ಅಸಾಮಾನ್ಯ ಸಭೆ/ 96 /2020-21 ದಿನಾಂಕ: 04.09.2020

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 24.08.2020 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

4/09/2020
ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳು ಮತ್ತು ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ.ಬಿಸಿಯು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿವಿಪ / 96 /2020-21** **ದಿನಾಂಕ: 03.09.2020.**

ದಿನಾಂಕ 24.08.2020 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜಾಫೆಟ್<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಶ್ರೀಮತಿ ಸೌಮ್ಯರೆಡ್ಡಿ | ಸದಸ್ಯರು |
| 3. | ಶ್ರೀ. ಪ್ರಕಾಶ್ ಕೆ. ರಾಥೋಡ್ | ಸದಸ್ಯರು |
| 4. | ಶ್ರೀ. ಕೆ.ಎ. ತಿಪ್ಪೇಸ್ವಾಮಿ | ಸದಸ್ಯರು |
| 5. | ಡಾ: ಎಸ್. ಹರೀಶ್ | ಸದಸ್ಯರು |
| 6. | ಡಾ: ಅಶಾ ಗಣೇಶ್ | ಸದಸ್ಯರು |
| 7. | ಡಾ: ಲತಾಕುಮಾರಿ | ಸದಸ್ಯರು |
| 8. | ಡಾ: ಬಿ.ಎ. ಅನುರಾಧಾ | ಸದಸ್ಯರು |
| 9. | ಡಾ. ಆರ್. ಪಾರ್ವತಿ | ಸದಸ್ಯರು |
| 10. | ಶ್ರೀ. ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 11. | ಪ್ರೊ: ಕೆ. ರಮೇಶ್ | ಸದಸ್ಯರು |
| 12. | ಡಾ. ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 13. | ಡಾ: ಪಿ.ವಿ. ಪದ್ಮಜಾ | ಸದಸ್ಯರು |
| 14. | ಪ್ರೊ. ಕೆ.ಎನ್. ಗೋದಾಮಣಿ | ಸದಸ್ಯರು |
| 15. | ಡಾ: ಎಸ್.ಬಿ. ಅನುಪಮಾ | ಸದಸ್ಯರು |
| 16. | ಡಾ: ವಿ.ಆರ್. ದೇವರಾಜು | ಸದಸ್ಯರು |
| 17. | ಡಾ: ವಿ. ಗಾಯತ್ರಿ | ಸದಸ್ಯರು |
| 18. | ಡಾ: ಎಸ್. ಹರಿಪ್ರಸಾದ್ | ಸದಸ್ಯರು |

19. ಡಾ: ಎನ್. ನರಸಿಂಹಮೂರ್ತಿ — ಸದಸ್ಯರು
20. ಡಾ: ಎಂ. ಮುನಿರಾಜು — ಸದಸ್ಯರು
21. ಡಾ: ಎಂ. ಪಾಂಡುರಂಗಪ್ಪ — ಸದಸ್ಯರು
22. ಪ್ರೊ. ಬಿ. ರಮೇಶ್ — ಸದಸ್ಯರು
    ಕುಲಸಚಿವರು (ಮೌಲ್ಯಮಾಪನ)
23. ಶ್ರೀ ಪಿ.ಎಲ್. ವೆಂಕಟೇಶಮೂರ್ತಿ — ಸದಸ್ಯರು
    ವಿತ್ತಾಧಿಕಾರಿಗಳು
24. ಶ್ರೀ ಪಿ. ಕುಮಾರ್ — ಸದಸ್ಯ ಕಾರ್ಯದರ್ಶಿಗಳು
    ಕುಲಸಚಿವರು

ಸಭೆಯ ಪ್ರಾರಂಭದಲ್ಲಿ ಕೋರಂಗಾಗಿ 21 ಸದಸ್ಯರ ಅಗತ್ಯವಿದ್ದು ಸಭೆಯಲ್ಲಿ 20 ಸದಸ್ಯರು ಹಾಜರಿರುವುದನ್ನು ಗಮನಿಸಿ ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಲು ಕುಲಪತಿಗಳು ತೀರ್ಮಾನಿಸಿದರು. ಈ ಮಧ್ಯ ಕೆಲವು ಸದಸ್ಯರು ಸಭೆಗೆ ಹಾಜರಾದರು. 11.45 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಕುಲಸಚಿವರು ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಕುಲಪತಿಗಳು ಹಾಗೂ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸ್ವಾಗತಿಸಿಧರು. ಹೊಸದಾಗಿ ನಾಮಕರಣ ಹೊಂದಿ ಸಭೆಗೆ ಆಗಮಿಸಿದ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ರವರನ್ನು ಹಾಗೂ ಶ್ರೀ. ಕೆ. ಎ. ತಿಪ್ಪೇಸ್ವಾಮಿ, ಯವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ನಂತರ ಅಧ್ಯಕ್ಷರು ನೂತನ ಸದಸ್ಯರಿಗೆ ತಮ್ಮ ಪರಿಚಯ ಮಾಡಿಕೊಳ್ಳಲು ಕೋರಿದರು. ಅದರಂತೆ, ಶ್ರೀ ಪ್ರಕಾಶ್ ಕೆ. ರಾಥೋಡ್ ರವರು ತಾವು ಈ ವಿಶ್ವವಿದ್ಯಾಲಯ ಎಂ.ಬಿ.ಎ ವಿದ್ಯಾರ್ಥಿಯಾಗಿದ್ದು, ತಾವು ಅಭ್ಯಾಸ ಮಾಡಿದ ವಿದ್ಯಾಸಂಸ್ಥೆಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮಕರಣ ಹೊಂದಿರುವುದು ಸಂತೋಷ ತಂದಿದೆ ಎಂದು ತಿಳಿಸಿ ತಮ್ಮ ಕ್ರಿಕೆಟ್ ಜೀವನ ಕುರಿತು ತಿಳಿಸಿ ತಮ್ಮನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಅತ್ಯುತ್ತಮ ಕ್ರೀಡಾಪಟು ಎಂದು ಪರಿಗಣಿಸಿ ಸ್ವರ್ಣಪದಕ ನೀಡಿರುವುದನ್ನು ತಿಳಿಸಿದರು. ಅದರಂತೆ, ಶ್ರೀ. ಕೆ. ಎ. ತಿಪ್ಪೇಸ್ವಾಮಿಯವರು ತಾವು ಸರ್ಕಾರದ ಮಟ್ಟದಲ್ಲಿ ಅಪರ ಕಾರ್ಯದರ್ಶಿಯಾಗಿ ಹಾಗೂ ಮಾಹಿತಿ ಆಯೋಗದ ಆಯುಕ್ತರಾಗಿ ಸೇವೆ ಸಲ್ಲಿಸಿರುವ ಬಗ್ಗೆ ಮಾಹಿತಿ ನೀಡಿದರು. ಈ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನೇಮಕಗೊಂಡಿರುವುದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಅವಕಾಶ ದೊರೆತಿದೆ ಎಂದು ತಿಳಿಸಿದರು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| | |
|---|---|
| ವಿಷಯ ಸಂಖ್ಯೆ–1 | ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಹೆಸರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂದು ಬದಲಾಯಿಸಿ ಸರ್ಕಾರ ಹೊರಡಿಸಿದ ಅಧಿಸೂಚನೆಯನ್ನು ಪ್ರಾಧಿಕಾರಗಳ ಗಮನಕ್ಕೆ ತರುವ ಕುರಿತು.<br><br>ಕುಲಸಚಿವರು ರಾಜ್ಯ ಪತ್ರದ ಕನ್ನಡ ಅಧಿಸೂಚನೆ ಪುಟ ಸಂಖ್ಯೆ 10 ಕಂಡಿಕೆ 26 ರಲ್ಲಿ "ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ" ದ ಹೆಸರನ್ನು "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಹಾಗೂ ಇಂಗ್ಲೀಷ್ ಅಧಿಸೂಚನೆಯ ಪುಟ ಸಂಖ್ಯೆ 21 ಕಂಡಿಕೆ 26 ರಲ್ಲಿ "Bengaluru Central University" ಬದಲಾಗಿ "Bengaluru City University" ಎಂದು ನಾಮಕರಣ ಮಾಡಿರುವ ಸರ್ಕಾರದ ಅಧಿಸೂಚನೆಯ ವಿವರಗಳನ್ನು ವಿವರಿಸಿದರು. ಸದರಿ ಅಧಿಸೂಚನೆಯ ಪ್ರಕಾರ, ಬೆಂಗಳೂರಿನ ಸರ್ಕಾರಿ ವಿಜ್ಞಾನ ಮಹಾವಿದ್ಯಾಲಯವನ್ನು ನೃಪತುಂಗ ಏಕಾತ್ಮಕ ವಿಶ್ವವಿದ್ಯಾಲಯವಾಗಿ ಸ್ಥಾಪನೆಯಾಗಿರುವುದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಹೊರತು, ಬೇರೆ ವಿಶ್ವವಿದ್ಯಾಲಯಗಳು ದೂರ ಶಿಕ್ಷಣ ನೀಡುವುದನ್ನು ನಿರ್ಬಂಧಿಸಿರುವುದು, ಒಳಗೊಂಡಿದೆ ಎಂದು ತಿಳಿಸಿದರು.<br>ಕುಲಪತಿಗಳು ಈ ಹೆಸರು ಬದಲಾವಣೆಗೆ ಕಾರಣಗಳನ್ನು ವಿವರಿಸುತ್ತಾ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದವರು ಸರ್ಕಾರಕ್ಕೆ ಪತ್ರ ಬರೆದು, ಕೇಂದ್ರ ಸರ್ಕಾರ ರಾಜ್ಯಗಳಲ್ಲಿ ಸ್ಥಾಪಿಸಿರುವ ಕೇಂದ್ರೀಯ ವಿಶ್ವವಿದ್ಯಾಲಯಗಳ ಹೆಸರಿನೊಂದಿಗೆ ಸಮ್ಮಿಳಿತವಾಗುವುದರಿಂದ, ಗೊಂದಲಕ್ಕೆ ಅವಕಾಶ ಕಲ್ಪಿಸುವುದಾಗಿ ಸೂಚಿಸಿ ಹೆಸರು ಬದಲಾವಣೆ ಮಾಡಲು ತಿಳಿಸಲಾಗಿತ್ತು. ಅದರಂತೆ ಸರ್ಕಾರದ ಅಧಿನಿಯಮಕ್ಕೆ ತಿದ್ದುಪಡಿ ತಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂಬ ಹೆಸರು ಬದಲಾವಣೆ ಮಾಡಿರುವುದಾಗಿ ತಿಳಿಸಿದರು. ಈ ಬದಲಾವಣೆಯಿಂದ, ಬೆಂಗಳೂರು ನಗರದ ಹೃದಯ ಭಾಗದಲ್ಲಿ ಸ್ಥಾಪನೆಯಾಗಿರುವ ಮತ್ತು ಇದರ ವ್ಯಾಪ್ತಿಗೆ ಬರುವ ಮಹಾವಿದ್ಯಾಲಯಗಳು ಸಹ ಬೆಂಗಳೂರು ನಗರದಲ್ಲಿರುವುದರಿಂದ ಈ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಹೆಸರು ಅರ್ಥಪೂರ್ಣವಾಗಿದೆ ಎಂದು ತಿಳಿಸಿದರು. ಬೆಂಗಳೂರು ನಗರ ಜಾಗತಿಕ ನಗರವಾಗಿ ಬೆಳೆಯುತ್ತಿರುವುದರೊಂದಿಗೆ, ಹಲವಾರು ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸುತ್ತಿದೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ/ಯೋಜನೆ, ಪಾಠ ಪ್ರವಚನಗಳ ಮೂಲಕ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ನಗರ ಮತ್ತು ನಾಗರೀಕರ ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತದೆ ಎಂದು ತಿಳಿಸಿದರು. |
| **ನಿರ್ಣಯ:** | **ಕರ್ನಾಟಕ ಸರ್ಕಾರದ ರಾಜ್ಯಪತ್ರ ಪ್ರಕಟಣೆಯ ಮೂಲಕ "ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ" ವನ್ನು "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" "Bengaluru Central University" ಬದಲಾಗಿ "Bengaluru City University"ಎಂದು ಹೆಸರು ಬದಲಾವಣೆ ಮಾಡಿರುವುದನ್ನು ಹಾಗೂ ಸರ್ಕಾರಿ ವಿಜ್ಞಾನ ಮಹಾವಿದ್ಯಾಲಯ ನೃಪತುಂಗ ಏಕಾತ್ಮಕ ವಿಶ್ವವಿದ್ಯಾಲಯವಾಗಿ ಪರಿಗಣಿಸಿರುವುದರಿಂದ ಈ ವಿಶ್ವವಿದ್ಯಾನಿಲಯದ ಸಂಯೋಜಿತ ಮಹಾವಿದ್ಯಾಲಯಗಳ ಪಟ್ಟಿಯಿಂದ ಕೈಬಿಡಲು, ಹಾಗೂ ಕರ್ನಾಟಕ** |

| | |
|---|---|
| | **ರಾಜ್ಯ ಮುಕ್ತ ವಿಶ್ವವಿದ್ಯಾಲಯ ಹೊರತು, ಬೇರೆ ವಿಶ್ವವಿದ್ಯಾಲಯಗಳು ದೂರ ಶಿಕ್ಷಣವನ್ನು ಪ್ರಾರಂಭಿಸುವುದನ್ನು ನಿಷೇದಿಸಿರುವುದನ್ನು ಸಭೆ ಗಮನಿಸಿ ಅನುಮೋದನೆ ನೀಡಿತು.** |
| ವಿಷಯ ಸಂಖ್ಯೆ-2 | ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಕರಡು ಪರಿನಿಯಮಗಳನ್ನು (Statutes) ಪರಿಗಣಿಸುವ ಕುರಿತು<br><br>ಕರಡು ಪರಿನಿಯಮಾವಳಿ ರಚನಾ ಸಮಿತಿ ರಚಿಸಿರುವ 11 ಪರಿನಿಯಮಗಳನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಕುಲಸಚಿವರು ಪರಿನಿಯಮಗಳನ್ನು ಸಭೆಯಲ್ಲಿ ಮಂಡಿಸುತ್ತಾ, ಸರ್ಕಾರ ಆದೇಶ ಸಂಖ್ಯೆ. ED 483 UNE 2017 ದಿನಾಂಕ.16.03.2019 ಪ್ರಕಾರ ಯು.ಜಿ.ಸಿ. ವೇತನ ಶ್ರೇಣಿಯನ್ನು ರಾಜ್ಯದ ಸರ್ಕಾರ / ಅನುದಾನಿತ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯಗಳ ಬೋಧಕರಿಗೆ ಅನ್ವಯಿಸಿ ಜಾರಿಗೊಳಿಸಿದಾಗ ನೇಮಕಾತಿಯ ಅರ್ಹತಾ ನಿಬಂಧನೆಗಳು ಯು.ಜಿ.ಸಿ ಮಾನದಂಡಗಳ ಪ್ರಕಾರ ಹಾಗೂ ಕರ್ನಾಟಕ (ಸಾಮಾನ್ಯ ನೇಮಕಾತಿ) ನಿಯಮಗಳು 1977 ಗಳಿಗೆ ಪೂರಕವಾಗಿ ಇರಬೇಕೆಂಬ ಆದೇಶದ ಹಿನ್ನಲೆಯಲ್ಲಿ ವಯೋಮಿತಿಯನ್ನು ಸದರಿ ನಿಯಮಗಳ ಪ್ರಕಾರ ನಿಗದಿ ಪಡಿಸಲು ಪರಿನಿಯಮ ರಚನಾ ಸಮಿತಿ ಶಿಫಾರಸ್ಸು ಮಾಡಿದೆ ಎಂದು ತಿಳಿಸಿದರು. ದಿನಾಂಕ 19.08.2020 ರಂದು ಜರುಗಿದ ಹಣಕಾಸು ಸಮಿತಿ ಈ ಕುರಿತು ಶಿಫಾರಸ್ಸು ಮಾಡಿದೆ ಎಂದು ತಿಳಿಸಿದರು. ಚರ್ಚೆಯಲ್ಲಿ ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿ, ಶ್ರೀ. ಪ್ರಕಾಶ್ ಕೆ. ರಾಥೋಡ್, ಡಾ. ಅನುಪಮ, ಡಾ ಗೋದಾಮಣಿ, ಪ್ರೊ. ಶ್ರೀನಿವಾಸ್ ಮೂರ್ತಿ, ಡಾ. ವಿ. ಆರ್. ದೇವರಾಜ್ ಮುಂತಾದವರು ಪಾಲ್ಗೊಂಡು ವಯೋಮಿತಿಗೆ ಸಂಬಂಧಿಸಿದಂತೆ ಯು.ಜಿ.ಸಿ ನಿಯಮಗಳಲ್ಲಿ ಯಾವುದೇ ನಿರ್ಬಂಧ ಇಲ್ಲದಿರುವುದರಿಂದ " Age Limit for Appointment of Assistant Professors" ಕೈ ಬಿಡುವುದು ಸೂಕ್ತವೆಂದು ತಿಳಿಸಿದರು. ಡಾ. ಪಾಂಡುರಂಗಪ್ಪ ರವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಯುವಕರನ್ನು ನೇಮಕ ಮಾಡಿಕೊಳ್ಳಲು ಅನುಕೂಲವಾಗುವುದರಿಂದ ಸಮಿತಿ ಈ ಅಂಶವನ್ನು ಪರಿನಿಯಮದಲ್ಲಿ ಸೇರಿಸಿದೆ ಎಂದು ತಿಳಸಿದರು. |
| ನಿರ್ಣಯ: | **ಸಭೆಯಲ್ಲಿ ಮಂಡಿಸಿದ್ದ ಪ್ರೊ. ಬಿ. ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ಸಲ್ಲಿಸಿದ ಈ ಕೆಳಕಂಡ 11 ಕರಡು ಪರಿನಿಯಮಗಳನ್ನು ದಿನಾಂಕ 19.08.2020 ರಂದು ಜರುಗಿದ ಹಣಕಾಸು ಸಮಿತಿಯ ನಿರ್ಣಯಗಳೊಂದಿಗೆ ವಿದ್ಯಾವಿಷಯಕ ಪರಿಷತ್ತು ಕೂಲಂಕುಷವಾಗಿ ಪರಿಶೀಲಿಸಿತು.**<br><br>**1.1 Statute Relating to Appointment and Promotion of Teachers and Other Academic Staff and for Implementation of Revised UGC Pay Scales in Bengaluru City University- 2020.**<br><br>**1.2 Statute Relating to the Manner of Conducting Interview for Appointment and Promotion of Teachers and Other Academic Staff in the Bengaluru City University, Bengaluru, 2020.** |

**1.3 Statute Governing Cadre, Recruitment and Promotion of Non Teaching, Technical and Ministerial Staff in the Bengaluru City University, 2020.**

**1.4 Statutes Governing the Affiliation of Colleges/Institutions Under the Jurisdiction of Bengaluru City University, 2020.**

**1.5 Statute Governing Seniority of Teachers of Bengaluru City University, 2020.**

**1.6 Statutes Governing Constitution, Meetings, Powers and Functions of Various Authorities of the Bengaluru City University, 2020.**

**1.7 Statute Governing Holding of Convocations for Conferring Degrees, 2020**

**1.8 Statute Governing the Institution of Endowments for Award of Gold Medals, Prizes, Fellowships, Scholarships Endowment Lectures and Academic Chairs, 2020.**

**1.9 Statute Governing Award Of Honorary Degrees or Academic Distinctions by Bengaluru City University at the Annual Convocations, 2020.**

**1.10 Statute Governing the Institution of Endowments for Award of Gold Medals, Prizes, Fellowships, Scholarships Endowment Lectures and Academic Chairs, 2020.**

**1.11 Statutes Governing Appointment, Powers, Functions and Responsibilties of the Officers of the University, 2020,**

ಕ್ರಮ ಸಂಖ್ಯೆ (1) ರ ಪರಿನಿಯಮ **(Statutes)** ರಲ್ಲಿ ಸಹಾಯಕ ಪ್ರಾಧ್ಯಾಪಕರ **(Assistant Professor)** ನೇಮಕಾತಿಗೆ ಸಂಬಂಧಿಸಿದ ಕಂಡಿಕೆ 4.1.C, 4.2.C, 4.3.1.I.C ಹಾಗೂ 4.4.I.C ನಲ್ಲಿ ನಿಗಧಿ ಪಡಿಸಿರುವ **"Age Limit For Appointment of Assistant Professor"** ಉಪಬಂಧಗಳು ಯು.ಜಿ.ಸಿ ರೆಗ್ಯುಲೇಷನ್ಸ್‌ನಲ್ಲಿ ಇಲ್ಲದಿರುವುದರಿಂದ ವಿಶ್ವವಿದ್ಯಾನಿಲಯದ ಪರಿನಿಯಮಗಳಲ್ಲಿ ಅಳವಡಿಸುವುದು ಸೂಕ್ತವಲ್ಲ, ಆದುದರಿಂದ ಸದರಿ ಉಪಬಂಧಗಳನ್ನು ಕೈಬಿಡುವಂತೆ ವಿದ್ಯಾವಿಷಯಕ ಪರಿಷತ್ತು ಅಭಿಪ್ರಾಯ ವ್ಯಕ್ತಪಡಿಸಿ ಅದರಂತೆ ನಿರ್ಣಯಿಸಿತು.

ಉಳಿದಂತೆ ಹಣಕಾಸು ಸಮಿತಿ ಶಿಫಾರಸ್ಸುಗಳನ್ನೊಳಗೊಂಡಂತೆ ಮೇಲಿನ **11** ಕರಡು ಪರಿನಿಯಮಗಳಿಗೆ ವಿದ್ಯಾವಿಷಯಕ ಪರಿಷತ್ತು ಅನುಮೋದನೆ ನೀಡಿತು.

ಸಮಿತಿಯ ಅಧ್ಯಕ್ಷರಾದ ಡಾ. ಬಿ. ತಿಮ್ಮೇಗೌಡ ಅವರು ತಮ್ಮ ಹಲವಾರು ಕೆಲಸಗಳ ಮಧ್ಯ ಬಿಡುವುಮಾಡಿಕೊಂಡು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾದ ವಿನಿಯಮಗಳನ್ನು **(Statutes)** ರಚಿಸಿ ಕೊಟ್ಟಿರುವುದಕ್ಕೆ ವಿದ್ಯಾವಿಷಯಕ ಪರಿಷತ್ ಧನ್ಯವಾದಗಳನ್ನು ಅರ್ಪಿಸಿ ಅವರ ಸೇವೆಯನ್ನು ಸ್ಮರಿಸಿ ದಾಖಲಿಸಿತು.

| | |
|---|---|
| ವಿಷಯ ಸಂಖ್ಯೆ-3 | ಎಂ.ಎಸ್ಸಿ ಭೌತಶಾಸ್ತ್ರ ವ್ಯಾಸಂಗದ ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು. |
| ನಿರ್ಣಯ: | **ಭೌತಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಿದ್ದಪಡಿಸಿರುವ ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮದ ಬೋಧನಾ ಅವಧಿ ಮತ್ತು ಕ್ರೆಡಿಟ್‌ಗಳಲ್ಲಿ ವ್ಯತ್ಯಾಸವಿರುವುದರಿಂದ, ವಿಜ್ಞಾನ ನಿಕಾಯದ ಡೀನರಾದ ಡಾ: ಎಂ. ಪಾಂಡುರಂಗಪ್ಪ ನವರು ಅಧ್ಯಯನ ಮಂಡಳಿ ಅಧ್ಯಕ್ಷರೊಂದಿಗೆ ಚರ್ಚಿಸಿ ಅಗತ್ಯ ಬದಲಾವಣೆ ಮಾಡಬೇಕೆಂದು ಸೂಚಿಸಿ ಪಠ್ಯಕ್ರಮಕ್ಕೆ ಅನುಮೋದನೆ ನೀಡಲಾಯಿತು.** |
| ವಿಷಯ ಸಂಖ್ಯೆ-4 | ಬಿ.ಎಸ್ಸಿ ಭೌತಶಾಸ್ತ್ರ ವ್ಯಾಸಂಗದ ಹೊಸ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು. |
| ನಿರ್ಣಯ: | **ಆಂತರಿಕ ಅಂಕಗಳ ವಿತರಣಾ ಕ್ರಮ ಕುರಿತು ವಿಜ್ಞಾನ ನಿಕಾಯದ ಡೀನರು ಅಧ್ಯಯನ ಮಂಡಳಿ ಅಧ್ಯಕ್ಷರಿಂದ ಮಾಹಿತಿ ಪಡೆದು ನೀಡಬಹುದೆಂದು ಸೂಚಿಸಿ, ಪಠ್ಯಕ್ರಮಕ್ಕೆ ಅನುಮೋದನೆ ನೀಡಲಾಯಿತು.** |
| ವಿಷಯ ಸಂಖ್ಯೆ-5 | ವಿದ್ಯಾವಿಷಯಕ ಪರಿಷತ್ತಿನ ಸೂಚನೆ ಮೇರೆಗೆ ಸಿದ್ದಪಡಿಸಲಾದ ಬಿ.ಎಸ್ಸಿ ರಸಾಯನಶಾಸ್ತ್ರ ವ್ಯಾಸಂಗದ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು |
| ನಿರ್ಣಯ: | ಬಿ.ಎಸ್ಸಿ ರಸಾಯನಶಾಸ್ತ್ರ ಪಠ್ಯಕ್ರಮ ಕುರಿತು ಅಧ್ಯಯನ ಮಂಡಳಿ ಅಧ್ಯಕ್ಷರಾದ ಡಾ: ಎಂ.ಪಾಂಡುರಂಗಪ್ಪ ನವರು ವಿವರಗಳನ್ನು ಒದಗಿಸಿದರು. ನಂತರ ಬಿ.ಎಸ್ಸಿ. ರಸಾಯನಶಾಸ್ತ್ರ ಪಠ್ಯಕ್ರಮವನ್ನು ಸಭೆ ಅನುಮೋದಿಸಿತು. ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಆಂತರಿಕ ಅಂಕಗಳ ವಿತರಣಾ ಕ್ರಮ ಕುರಿತು ಅಧ್ಯಯನ ಮಂಡಳಿ ಅಧ್ಯಕ್ಷರು ನೀಡಬೇಕೆಂದು ಸೂಚಿಸಲಾಯಿತು. |
| ವಿಷಯ ಸಂಖ್ಯೆ-6 | ಬಿ.ಎಸ್ಸಿ ಜೀವರಸಾಯನಶಾಸ್ತ್ರ ವ್ಯಾಸಂಗದ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು |
| ನಿರ್ಣಯ: | ಬಿ.ಎಸ್ಸಿ ಜೀವರಸಾಯನಶಾಸ್ತ್ರ ವ್ಯಾಸಂಗದ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಮಾದರಿ ಪ್ರಶ್ನೆ ಪತ್ರಿಕೆ ಎಲ್ಲಾ ವಿಷಯಗಳಿಗೆ ಏಕರೂಪಿಯಾಗಿರಬೇಕು ಎಂದು ತಿಳಿಸಲಾಯಿತು. ಈ ಕುರಿತು ಸಂಬಂಧಪಟ್ಟ ನಿಕಾಯಗಳ ಡೀನರು ಪರಿಶೀಲಿಸಬೇಕೆಂದು ಅಗತ್ಯವಾದರೆ ಆಯಾ ಅಧ್ಯಯನ ಮಂಡಳಿಗಳ ಅಧ್ಯಕ್ಷರನ್ನು ಸಂಪರ್ಕಿಸಿ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಂತಿಮಗೊಳಿಸಬೇಕೆಂದು ತೀರ್ಮಾನಿಸಲಾಯಿತು. |

| | |
|---|---|
| ವಿಷಯ ಸಂಖ್ಯೆ–7 | ಬಿ.ಎಸ್ಸಿ ಗಣಿತಶಾಸ್ತ್ರ ವ್ಯಾಸಂಗದ ಮೊದಲನೇ, ಎರಡನೇ, ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು 2020–21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು |
| ನಿರ್ಣಯ: | **ಗಣಿತಶಾಸ್ತ್ರ ಅಧ್ಯಯನ ಮಂಡಳಿ ಸಿದ್ದಪಡಿಸಿದ ಬಿ.ಎಸ್ಸಿ ಗಣಿತಸಾಶ್ತ್ರ ವ್ಯಾಸಂಗದ 1 ರಿಂದ 4 ಸೆಮಿಸ್ಟರ್ ಪಠ್ಯಕ್ರಮವನ್ನು ಅನುಮೋದಿಸಲಾಯಿತು.**<br>**ಅಧ್ಯಯನ ಮಂಡಳಿ ಅಧ್ಯಕ್ಷರು ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಆಂತರಿಕ ಅಂಕಗಳ ವಿತರಣಾ ಕ್ರಮ ಒದಗಿಸಲು ಸೂಚಿಸಲಾಯಿತು.** |
| ವಿಷಯ ಸಂಖ್ಯೆ–8 | ಬಿ.ವಿ.ಎ (Graphic Art) ವ್ಯಾಸಂಗದ ಪಠ್ಯಕ್ರಮವನ್ನು 2020–21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು. |
| ನಿರ್ಣಯ: | **ಬಿ.ವಿ.ಎ (Graphic Art) ವ್ಯಾಸಂಗದ ಪಠ್ಯಕ್ರಮವನ್ನು ಸಭೆ ಅನುಮೋದಿಸಿತು. ಪಠ್ಯಕ್ರಮದಲ್ಲಿರುವ ಅಕ್ಷರ ದೋಷಗಳನ್ನು ಸರಿಪಡಿಸಬೇಕೆಂದು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಲಾಯಿತು.** |
| ವಿಷಯ ಸಂಖ್ಯೆ–9 | ಸಾಂಕ್ರಾಂಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುವ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆ ನಡೆಸುವ ಬಗ್ಗೆ ಮತ್ತು ಶೈಕ್ಷಣಿಕ ವೇಳಾಪಟ್ಟಿ ತಯಾರಿಸಲು ಯುಜಿಸಿ ನೀಡಿರುವ ಪುನರ್‌ವಿಮರ್ಶಿತ ಮಾರ್ಗ ಸೂಚಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ. |
| ನಿರ್ಣಯ: | **ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ ED/197/UNE/2020, Bangalore dated 10.07.2020 ರ ನಿರ್ದೇಶನದ ಪ್ರಕಾರ ವಿಶ್ವವಿದ್ಯಾನಿಲಯ ಪರೀಕ್ಷೆ ನಡೆಸಲು ಹಾಗೂ ಶೈಕ್ಷಣಿಕ ವೇಳಾಪಟ್ಟಿ ಸಿದ್ದಪಡಿಸಲು ಸಭೆ ಅನುಮೋದಿಸಲಾಯಿತು.** |
| ವಿಷಯ ಸಂಖ್ಯೆ–10 | ಯು.ಜಿ.ಸಿ ಯಿಂದ ಪಿ.ಹೆಚ್.ಡಿ ಕೋರ್ಸ್‌ವರ್ಕ್‌ನಲ್ಲಿ 50 ಅಂಕಗಳ Research and Publication Ethics (RPE) ವಿಷಯವನ್ನು ಕಡ್ಡಾಯಗೊಳಿಸಿರುವುದನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಅಳವಡಿಸಿಕೊಳ್ಳುವ ಕುರಿತು. |
| ನಿರ್ಣಯ: | **ಪಿ.ಹೆಚ್.ಡಿ ಕೋರ್ಸ್‌ವರ್ಕ್ ಪಠ್ಯಕ್ರಮಕ್ಕೆ ಒಪ್ಪಿಗೆ ಸೂಚಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.** |
| ವಿಷಯ ಸಂಖ್ಯೆ–11 | ಸರ್ಕಾರದ ಪತ್ರ ಸಂಖ್ಯೆ: ಇಡಿ 457 ಯುಬಿವಿ 2018 ದಿನಾಂಕ 09.07.2020 ರ ನಿರ್ದೇಶನದ ಪ್ರಕಾರ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ವಿಷಯಗಳಿಗೆ Choice Based Credit System (Semester Scheme) ಅಡಿಯಲ್ಲಿ ರಚಿಸಲಾದ ಕರಡು ವಿನಿಯಮಗಳನ್ನು (Regulations) ಅನುಮೋದನೆಗಾಗಿ ಮಂಡಿಸಿದೆ. |

| | |
|---|---|
| ನಿರ್ಣಯ: | ಸರ್ಕಾರದ ಸೂಚನೆ ಮೇರೆಗೆ ತಿದ್ದುಪಡಿ ಮಾಡಿದ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ವಿಷಯಗಳಿಗೆ **Choice Based Credit System (Semester Scheme)** ಅಡಿಯಲ್ಲಿ ರಚಿಸಲಾದ ಕರಡು ವಿನಿಯಮ **(Regulations)** ಗಳಿಗೆ ಸಭೆ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ-12<br><br>ನಿರ್ಣಯ: | ಎಂ.ಎಸ್ಸಿ ಸಸ್ಯ ವಿಜ್ಞಾನ ವ್ಯಾಸಂಗದ ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು.<br><br>ಸ್ನಾತಕೋತ್ತರ ಸಸ್ಯವಿಜ್ಞಾನ ವಿಷಯದ ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮಕ್ಕೆ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ-13<br><br>ನಿರ್ಣಯ: | ಎಂ.ಎಸ್ಸಿ ಗಣಿತಶಾಸ್ತ್ರ ವ್ಯಾಸಂಗದ ಮೊದಲನೇ, ಎರಡನೇ, ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು<br><br>ಸ್ನಾತಕೋತ್ತರ ಗಣಿತಶಾಸ್ತ್ರ ವಿಷಯದ ಮೊದಲನೇ, ಎರಡನೇ, ಮೂರನೇ ಹಾಗೂ ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮವಕ್ಕೆ ಅನುಮೋದನೆ ನೀಡಲಾಯಿತು.<br><br>ಈ ಹಂತದಲ್ಲಿ ಸದಸ್ಯರಾದ ಡಾ: ನರಸಿಂಹಮೂರ್ತಿಯವರ ಸಲಹೆಯನ್ನು ಪರಿಗಣಿಸಿ, ಈಗಾಗಲೇ ಕರಡು ಪರಿನಿಯಮಗಳಲ್ಲಿರುವ ಅವಕಾಶದಂತೆ ಕೆಳಗಿನ ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಾಯಿ ಸಮಿತಿ ರಚಿಸಲಾಯಿತು.<br><br>1. ಕುಲಪತಿಗಳು .. ಅಧ್ಯಕ್ಷರು<br>2. ಎಲ್ಲಾ ಡೀನರು .. ಸದಸ್ಯರು<br>3. ಡಾ.ವಿ.ಆರ್. ದೇವರಾಜು .. ಸದಸ್ಯರು<br>4. ಪ್ರೊ. ಕೆ.ಎನ್. ಗೋದಾಮಣಿ .. ಸದಸ್ಯರು<br>5. ಡಾ: ಎಸ್.ಬಿ. ಅನುಪಮಾ .. ಸದಸ್ಯರು<br>6. ಡಾ: ಪಿ.ವಿ. ಪದ್ಮಜಾ .. ಸದಸ್ಯರು<br>7. ಕುಲಸಚಿವರು(ಮೌಲ್ಯಮಾಪನ) .. ಸದಸ್ಯರು<br>8. ಕುಲಸಚಿವರು .. ಸದಸ್ಯಕಾರ್ಯದರ್ಶಿಗಳು<br><br>ಮೇಲಿನ ಸಮಿತಿ, ವಿವಿಧ ಅಧ್ಯಯನ ಮಂಡಳಿಗಳು ನೀಡುವ ಪಠ್ಯಕ್ರಮಗಳನ್ನು ಪರಿಶೀಲಿಸಿ, ಅವುಗಳು ವಿನಿಯಮಗಳ ಪ್ರಕಾರ ಹಾಗೂ ಇತರ ಅಗತ್ಯವಾದ ವಿವರಗಳು ಇರುವ ಕುರಿತು ಖಚಿತಪಡಿಸಿಕೊಳ್ಳಬೇಕೆಂದು ಸೂಚಿಸಲಾಯಿತು. ತುರ್ತು ಸಂದರ್ಭಗಳಲ್ಲಿ ಪಠ್ಯಕ್ರಮಗಳನ್ನು |

<table>
<tr>
<td></td>
<td>ಅನುಮೋದಿಸಿ ನಂತರ ವಿದ್ಯಾವಿಷಯಕ ಪರಿಷತದ ಸಭೆಯ ಘಟನೋತ್ತರ ಅನುಮೋದನೆ ಪಡೆಯ ಬೇಕೆಂದು ಹಾಗೂ ಕಾಲಕಾಲಕ್ಕೆ ಕುಲಪತಿಗಳಿಂದ ಸೂಚಿತವಾಗುವ ಇತರ ಶೈಕ್ಷಣಿಕ ವಿಷಯಗಳ ಕುರಿತು ಸಲಹೆ ನೀಡಬಕೆಂದು ಸೂಚಿಸಲಾಯಿತು.</td>
</tr>
<tr>
<td>ವಿಷಯ ಸಂಖ್ಯೆ–14</td>
<td>ವಾಣಿಜ್ಯ ಸ್ನಾತಕ ಅಧ್ಯಯನ ಮಂಡಳಿ ಸಿದ್ದಪಡಿಸಿದ ಏಳು ಕೋರ್ಸುಗಳ ವ್ಯಾಸಂಗದ ಪಠ್ಯಕ್ರಮಗಳನ್ನು 2020–21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು<br><br>
ವಾಣಿಜ್ಯ ಸ್ನಾತಕ ಅಧ್ಯಯನ ಮಂಡಳಿ ಸಿದ್ದಪಡಿಸಿದ ಕೆಳಗೆ ನಮೂದಿಸಿರುವ 7 ಕೋರ್ಸು ವ್ಯಾಸಂಗಗಳ ಪಠ್ಯಕ್ರಮವನ್ನು ಅಧ್ಯಯನ ಮಂಡಳಿ ಅಧ್ಯಕ್ಷರು ಹಾವೂ ವಾಣಿಜ್ಯ ನಿಕಾಯದ ಡೀನರು ಸಭೆಯಲ್ಲಿ ಮಂಡಿಸಿ ವಿವರಣೆ ನೀಡಿದರು. ವಿಶ್ವವಿದ್ಯಾನಿಲಯ ಪ್ರಾರಂಭಿಸಿರುವ ಈ ಹೊಸ ವ್ಯಾಸಂಗಗಳಿಂದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ಉದ್ಯೋಗ ಆಧಾರಿತ ವೃತ್ತಿಪರ ವ್ಯಾಸಂಗ ದೊರಕುವಂತಾಗಿದೆ ಎಂದು ತಿಳಿಸಿದರು.<br><br>
1. B.Com – 1st to 6th Semesters<br>
2. B.Com(Honors) - 1st to 6th Semesters<br>
3. B.Com(Accounting & Finance) - 1st to 6th Semesters<br>
4. B.Com(Business Analytics) -1st to 6th Semesters<br>
5. B.Com (Logistics & Supply Chain Management)- 1st to 6th Semesters<br>
6. BBA - 1st to 6th Semesters<br>
7. B.Voc Degree(Accounting & Taxation) – 1st and 2nd Semesters<br><br>
ಸದಸ್ಯರಾದ ಪ್ರೊ. ಗೋದಾಮಣಿಯವರು ಪಠ್ಯಕ್ರಮ ಸಿದ್ಧಪಡಿಸಿರುವ ಅಧ್ಯಯನ ಮಂಡಳಿ ಹಾಗೂ ಉಪಸಮಿತಿಗಳ ಸದಸ್ಯರಿಗೆ ಹಾಗೂ ಅಧ್ಯಕ್ಷರಿಗೆ ಅಭಿನಂದನೆಗಳನ್ನು ತಿಳಿಸಿ, Skill Practicals ನಲ್ಲಿ 50% ಅಂಕಗಳನ್ನು ಮಹಾವಿದ್ಯಾಲಯ ಹಾಗೂ 50% ಅಂಕಗಳನ್ನು ವಿಶ್ವವಿದ್ಯಾನಿಲಯದ ಅಂತಿಮ ಪರೀಕ್ಷೆಗೆ ಇಟ್ಟಿರುವುದು ಮರುಪರಿಶೀಲಿಸಬೇಕೆಂದು ತಿಳಿಸಿದರು. ಬಿ.ಓ.ಎಸ್. ಅಧ್ಯಕ್ಷರಾದ ಡಾ: ಮುನಿರಾಜು ರವರು ವಿವರ ನೀಡಿ, ಮಹಾವಿದ್ಯಾಲಯವರಿಗೆ ನೀಡಲಾದ ಅಂಕಗಳು ಎಲ್ಲಾ ವಿಷಯಗಳಿಗೆ ಸಂಬಂಧಿಸಿದ್ದು, ವಿದ್ಯಾರ್ಥಿಗಳು ಸಿದ್ಧಪಡಿಸುವ ವರದಿ, ಹಾಜರಾತಿ ವರ್ಗ ಪರೀಕ್ಷೆ ಇತ್ಯಾದಿಗಳ ಮೇಲೆ ಅವಲಂಬಿತವಾಗಿದೆ ಎಂದು ತಿಳಿಸಿದರು. ಇದಲ್ಲದೆ, ಸದರಿ ದಾಖಲೆಗಳನ್ನು ಅಂತರಿಕ ಮತ್ತು ಬಾಹ್ಯ ಪರೀಕ್ಷಕರು ಮೌಲ್ಯಮಾಪನ ಮಾಡುತ್ತಾರೆ ಎಂದು ತಿಳಿಸಿದರು.<br><br>
ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ಯವರು ಮಹಾವಿದ್ಯಾಲಯಗಳು ವರ್ಕ್‌ಶಾಪ್ ಆಯೋಜಿಸ ಬೇಕೆಂದು ಹಾಗೂ ಕಾಲಕಾಲಕ್ಕೆ ಓರಿಯಂಟೇಶನ್ ಕಾರ್ಯಕ್ರಮ ನಡೆಸಬೇಕೆಂದು ಸಲಹೆ ನೀಡಿದರು.</td>
</tr>
</table>

ಸದಸ್ಯರಾದ ಡಾ: ಮನಿರಾಜು ರವರು ಈ ಕುರಿತು ತಮ್ಮ ವಿಭಾಗ ಈಗಾಗಲೇ ಕಾರ್ಯ ಪ್ರವೃತ್ತವಾಗಿದ್ದು, ಅಧ್ಯಾಪಕರಿಗೆ ಓರಿಯಂಟೇಶನ್ ಕಾರ್ಯಕ್ರಮ ಹಾಗೂ ವರ್ಕ್‌ಶಾಪ್‌ಗಳನ್ನು ಜರುಗಿಸಲಾಗುತ್ತಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ: ನರಸಿಂಹಮೂರ್ತಿಯವರು B.Com (Honors) ಕೋರ್ಸಿಗೆ ನಿಯಮಾವಳಿಗಳಲ್ಲಿ ಅವಕಾಶವಿಲ್ಲವೆಂದು ತಿಳಿಸಿದರು. ಸದಸ್ಯರಾದ ಶ್ರೀ. ಪ್ರಕಾಶ್ ಕೆ. ರಾಥೋಡ್ ರವರು ನಿಯಮಗಳಲ್ಲಿ ಅವಕಾಶವಿಲ್ಲದಿದ್ದರೆ ಈ ಕೋರ್ಸು ಪ್ರಾರಂಭಿಸುವುದು ಸರಿಯಲ್ಲವೆಂದು ತಿಳಿಸಿದರು.

ಅಧ್ಯಯನ ಮಂಡಳಿ ಅಧ್ಯಕ್ಷರಾದ ಡಾ: ಮುನಿರಾಜು ರವರು ಹಾಗೂ ಸದಸ್ಯರಾದ ಡಾ: ಪದ್ಮಜಾ ರವರು ವಿವರ ನೀಡಿ, B.Com (Honors) ಕೋರ್ಸು ಯು.ಜಿ.ಸಿ ಅನುಮೋದಿತ ವ್ಯಾಸಂಗವಾಗಿದ್ದು, ಇದು ಮೂರು ವರ್ಷಗಳ ಕೋರ್ಸ್ ಆಗಿದೆ. ಹಾಗೂ ಈ ಕೋರ್ಸಿಗೆ ಒಟ್ಟು 172 ಕ್ರೆಡಿಟ್‌ಗಳು ಇವೆ ಎಂದು ತಿಳಿಸಿದರು. ಇಂತಹ ವ್ಯಾಸಂಗ ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯದ ಮಹಾವಿದ್ಯಾಲಯಗಳಲ್ಲಿ, ಸ್ವಾಯತ್ತ ಮಹಾವಿದ್ಯಾಲಯಗಳಲ್ಲಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಬಿ.ಕಾಂ ಎಂಬ ಪದನಾಮದಲ್ಲಿ ಯಾವುದೇ ವಿಶೇಷ ವ್ಯಾಸಂಗವನ್ನು ನೀಡಬಹುದು ಎಂದು ತಿಳಿಸಿದರು. ಶ್ರೀ. ತಿಪ್ಪೇಸ್ವಾಮಿ, ಪ್ರೊ. ದೇವರಾಜು, ಡಾ: ಪದ್ಮಜಾ, ಡಾ: ಲಿಡಿಯಾ ಪಿ. ಸ್ಯಾಮುಯೆಲ್ ಹಾಗೂ ಹಲವಾರು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಮೂರು ವರ್ಷದ ವ್ಯಾಸಂಗವಾಗಿರುವುದರಿಂದ ಪರಿಗಣಿಸ ಬಹುದು ಎಂದು ತಿಳಿಸಿ ಕ್ರೆಡಿಟ್ ಹೆಚ್ಚಾಗುವ ಕುರಿತು ಆತಂಕ ವ್ಯಕ್ತ ಪಡಿಸಿದರು.

ನಿರ್ಣಯ:

**ಅಂತಿಮವಾಗಿ B.Com (Honors) ಕೋರ್ಸಿನ ಪಠ್ಯಕ್ರಮ ಕುರಿತಂತೆ ಪರಿಶೀಲಿಸಿ ತೀರ್ಮಾನಿಸಲು ಸ್ಥಾಯಿ ಸಮಿತಿಗೆ ವಹಿಸಲು ತೀರ್ಮಾನಿಸಲಾಯಿತು. ಕೆಳಕಂಡ ವ್ಯಾಸಂಗದ ಪಠ್ಯಕ್ರಮಗಳಿಗೆ ಸಭೆ ಅನುಮೋದನೆ ನೀಡಿತು.**

1. **B.Com – $1^{st}$ to $6^{th}$ Semesters**
2. **B.Com. (Business Data Analytics) -$1^{st}$ to $6^{th}$ Semesters**
3. **B.Com (Logistics & Supply Chain Management)- $1^{st}$ to $6^{th}$ Semesters**
4. **BBA - $1^{st}$ to $6^{th}$ Semesters**

ಕಳೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾನಿಲಯದ I ರಿಂದ IV ಸೆಮೆಸ್ಟರ್ ವ್ಯಾಸಂಗಗಳಲ್ಲಿ ಕನ್ನಡ ಭಾಷಾ ಬೋಧನೆಗೆ ಕಡ್ಡಾಯವಾಗಿ ಅವಕಾಶ ಕಲ್ಪಿಸಬೇಕೆಂದು ನೀಡಿರುವ ಸೂಚನೆಗೆ ಒಪ್ಪಿಗೆ ಸೂಚಿಸಿರುವ ಹಿನ್ನಲೆಯಲ್ಲಿ **ಕೆಳಗೆ ನಮೂದಿಸಿದ ಪಠ್ಯಕ್ರಮಗಳಲ್ಲಿ ಭಾಷಾ ವಿಷಯಕ್ಕೆ ಅವಕಾಶ ಕಲ್ಪಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಲಾಯಿತು.**

1. **B.Com. (Accounting & Finance) - $3^{rd}$ & $4^{th}$ Semester**
2. **B.Com (Honors)- $3^{rd}$ & $4^{th}$ Semester**
3. **B.Voc. Degree (Accounting & Taxation) – 1st and $2^{nd}$ Semester.**

| ಸಾಮಾನ್ಯ ಚರ್ಚೆಯ ವಿಷಯಗಳು | |
|---|---|
| 1 | ಕಳೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾನಿಲಯದ I ರಿಂದ IV ಸೆಮೆಸ್ಟರ್ ವ್ಯಾಸಂಗಗಳಲ್ಲಿ ಕನ್ನಡ ಭಾಷಾ ಬೋಧನೆಗೆ ಕಡ್ಡಾಯವಾಗಿ ಅವಕಾಶ ಕಲ್ಪಿಸಬೇಕೆಂದು ನೀಡಿರುವ ಸೂಚನೆಗೆ ಒಪ್ಪಿಗೆ ಸೂಚಿಸಲಾಗಿದೆ. ಆದರೆ ಕೆಲವು ವ್ಯಾಸಂಗಗಳ ಅದರಲ್ಲೂ B.Com. (Finance & Accounting), B.Com. (Hons) ಕೋರ್ಸುಗಳ 3 ಹಾಗೂ 4 ನೇ ಸೆಮೆಸ್ಟರ್‌ಗಳಲ್ಲಿ ಮತ್ತು B.Voc. 1 ಮತ್ತು 2ನೇ ಸೆಮಿಸ್ಟರ್ ಕೋರ್ಸುಗಳಲ್ಲಿ ಭಾಷಾ ಬೋಧನೆಗೆ ಅವಕಾಶ ಕಲ್ಪಿಸಿಲ್ಲವೆಂದು ಹಲವು ದೂರುಗಳು ಬಂದಿರುವುದಾಗಿ ಎಂದು ಕುಲಪತಿಗಳು ತಿಳಿಸಿದರು. ಇಂದು ರಚಿಸಿದ ಸ್ಥಾಯಿ ಸಮಿತಿ ಈ ಕುರಿತು ಪರಿಶೀಲಿಸಿ ವರದಿ ಸಲ್ಲಿಸ ಬೇಕೆಂದು ಸೂಚಿಸಿದರು. |
| ನಿರ್ಣಯ | **ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಕೋರ್ಸುಗಳ 1 ನೇ, 2 ನೇ, 3 ನೇ ಹಾಗೂ 4 ನೇ ಸೆಮೆಸ್ಟರ್‌ಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷಾ ಕಡ್ಡಾಯ ಬೋಧನೆಗೆ ಅವಕಾಶ ಕಲ್ಪಿಸ ಬೇಕೆಂದು ಮತ್ತು ಭಾಷಾ ವಿಷಯಗಳ ಭೋಧನೆ ಹಾಗೂ ಪಠ್ಯಕ್ರಮ ಸ್ವರೂಪ ಕುರಿತಂತೆ ಬೆಂಗಳೂರು ವಿಶ್ವವಿದ್ಯಾಲಯದ ಮಾದರಿ ಅನುಸರಿಸ ಬೇಕೆಂದು ತೀರ್ಮಾನಿಸಲಾಯಿತು.** |
| 2 | ಸದಸ್ಯರಾದ ಪ್ರೋ: ರಮೇಶ್ ರವರು ಎಂ.ಎಸ್‌ಸಿ ಗಣಕಯಂತ್ರ ವಿಜ್ಞಾನ ವಿಷಯ ಆನ್ ಲೈನ್ ಸಂಯೋಜನಾ ಪೋರ್ಟಲ್‌ನಲ್ಲಿ ಕಂಡುಬರುತ್ತಿಲ್ಲವೆಂದು ತಿಳಿಸಿದರು. ಈಗಾಗಲೇ ಸಂಯೋಜನಾ ವಿವರಗಳನ್ನು upload ಮಾಡುವ ಕೊನೆಯ ದಿನಾಂಕ ಮುಗಿದಿರುವುದರಿಂದ ಯಾವ ಕ್ರಮ ಕೈಗೊಳ್ಳಲು ಆಗುವದಿಲ್ಲವೆಂದು ಅಧ್ಯಕ್ಷರು ತಿಳಿಸಿದರು. ಆದರೂ ಈ ಕುರಿತು ಮುಂದಿನ ವರ್ಷ ಗಮನಿಸುವುದಾಗಿ ತಿಳಿಸಲಾಯಿತು. |
| 3 | ಸದಸ್ಯರಾದ ಶ್ರೀ. ತಿಪ್ಪೇಸ್ವಾಮಿಯವರು ಎಲ್ಲಾ ವಿದ್ಯಾರ್ಥಿಗಳು Smart Phone ಉಪಯೋಗಿಸುವುದಲ್ಲಿ ಪರಿಣಿತಿ ಹೊಂದಿರುವುದರಿಂದ ಈ ವಿವೇಕವನ್ನು ಪಾಠ ಪ್ರವಚನ ಹಾಗೂ ಪ್ರಯೋಗ ಶಾಲೆಗಳಲ್ಲಿ ಉಪಯೋಗಿಸಲು ಕ್ರಮ ವಹಿಸಬೇಕೆಂದು ಸಲಹೆ ನೀಡಿದರು. |

| | |
|---|---|
| 4 | ಸದಸ್ಯರಾದ ಡಾ: ಬಿ. ಎ. ಅನುಪಮಾ ಅವರು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ತೀರ್ಮಾನ/ಯೋಜನೆಗಳನ್ನು ಸರಿಯಾಗಿ ಕಾರ್ಯರೂಪದಲ್ಲಿ ಬರುತ್ತಿರುವ ಕುರಿತು ಪರಿವೀಕ್ಷಣೆಗೆ ಅವಕಾಶವಿರಬೇಕೆಂದು ತಿಳಿಸಿದರು. |
| 5 | ಸದಸ್ಯರಾದ ಪ್ರೊ. ಗೋದಾಮಣಿಯವರು ಅಧ್ಯಯನ ಮಂಡಳಿ ಸಭೆಗಳಿಗೆ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ವಿಶೇಷ ಅಹ್ವಾನಿತರಾಗಿ ಕರೆದಲ್ಲಿ ಭಾಗವಹಿಸಿ ಅಗತ್ಯ ಸಲಹೆ ನೀಡಲು ಸಿದ್ದರಾಗಿರುವುದಾಗಿ ತಿಳಿಸಿದರು. ಸದಸ್ಯರಾದ ಡಾ: ನರಸಿಂಹಮೂರ್ತಿಯವರು ನಿಯಮಾವಳಿಗಳಲ್ಲಿ ಇದಕ್ಕೆ ಅವಕಾಶವಿಲ್ಲ ಎಂದು ತಿಳಿಸಿ, ಆಯಾ ವಿಷಯಗಳ ಶಿಕ್ಷಕರು ಸದಸ್ಯರು/ಅಹ್ವಾನಿತರಾಗಲು ಅವಕಾಶವಿದೆ ಎಂದು ತಿಳಿಸಿದರು. |

ಅಂತಿಮವಾಗಿ ಕುಲಸಚಿವರು ಎಲ್ಲಾ ಸದಸ್ಯರ ಸಹಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸಹಿ/-**
**ಕುಲಸಚಿವರು**

**ಸಹಿ/-**
**ಕುಲಪತಿಗಳು**

04/09/2020

**ಕುಲಸಚಿವರು**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**